## ಪದಬಂಧ




**ಎಡದಿಂದ ಬಲಕ್ಕೆ**

1. ಮದ ಏರಿದ ಆನೆಯಿಂದ ಎಲ್ಲರನ್ನೂ ರಕ್ಷಿಸಿದವ ಕೃಷ್ಣ ತಾನೇ? 4
3. ವಕ್ರ ಬುದ್ಧಿಯ ಪರಿಚಯವೂ ಇಲ್ಲದವಳು ಆತನ ಕಿರಿಯ ಮಗಳು 3
4. ಗಜಯಾತ್ರೆಯಲ್ಲಿ ಭಾಗವಹಿಸುವುದಾದರೆ ತುಂಬ ಎಚ್ಚರ ಇರಲಿ 3
6. ಕಟ್ಟಿಗೆ ತುಂಡು ಹಂಚುವ ಉಪಾಯ ಎಲ್ಲರಿಗೂ ತಿಳಿದು ಹೋಯಿತು 4
8. ಕೆಲಸಕ್ಕೆಂದು ನಡೆದಾಡುವ ಅಂಗದ ನಾಲ್ಕರ ಒಂದಂಶ ಎಷ್ಟು? 4
10. ನಗರಕ್ಕೆ ಬಂದು ಸಂಪಾದನೆಗೆಂದು ಎಲ್ಲರನ್ನು ನಗಿಸುವ ಮನುಷ್ಯ ಗೊತ್ತೇ? 4
12. ಪುರಸ್ಕರಿಸಲೆಂದು ಎಲ್ಲರಿಗೂ ಕೊಟ್ಟದ್ದು ರುಚಿ ತುಂಬಿದ, ಸುವಾಸನೆಯ ಮಾವಿನ ಹಣ್ಣು 4
16. ಕಡ್ಡಿಗಳನ್ನು ಅರಸಿ ಬಂದವರನ್ನು ಹೆದರಿಸಿದ್ದು ಕಂಬಳಿ ಹೊದ್ದ ಪ್ರಾಣಿ 3
17. ಸುಳ್ಳನ್ನು ಹೇಳದೆ ಹೇಗಾದರೂ ಯಾರಿಗೂ ತಿಳಿಯದಂತೆ ಬಂದುಬಿಡು 3
18. ಕುಜನ ಹೆಸರನ್ನು ಹೇಳುತ್ತ ಹೇಗಾದರೂ ಬಳ್ಳಿ ಮಂಟಪವನ್ನು ತಲುಪು 4

**ಮೇಲಿನಿಂದ ಕೆಳಕ್ಕೆ**

1. ದುರ್ವಿಧಿಯನ್ನು ಬದಲಿಸ ಹೋಗಿ ತೀವ್ರ ಬಡತನ ಬಂತು 3
2. ರಾಜ್ಯದಲ್ಲೇ ಹುಡುಕಿದರೆ ಬೆಚ್ಚನ್ನ ಮೇಲುಹೊದಿಕೆ ಸಿಕ್ಕೀತು 3
3. ಕುಕ್ಕಿ ಕುಕ್ಕಿ ಕಾಟ ಕೊಡುತ್ತದೆ ನೋಡಿ ಕೋಳಿ 3
5. ತಳ್ಳು ಗಾಡಿಯನ್ನೇ ತಳ್ಳುತ್ತ ಓಡಾಡುವುದು ಆತನ ಒಂದು ದುಶ್ಚಟ 3
6. ಪ್ರಸಾದವನ್ನು ಹಂಚಲು ಹೋಗುವಾಗಲೂ ಅಲಂಕಾರ ಸಾಮಗ್ರಿ ಬೇಕೇ? 4
7. ಬನ ತಿರುವಿ ಆಶ್ಚರ್ಯ ತೋರಿದ್ದು ಒಬ್ಬ ದೇವತೆ 4
8. ಆತನ ಕೆಲಸ ಬಹಳ ತೂಕವಾದದ್ದು 4
9. ಗಮಾರನಾದರೂ ಆತ ಧರಿಸಿರುವ ಬಟ್ಟೆಯ ಇಸ್ತ್ರಿ ಚೂರೂ ಕೆಟ್ಟಿಲ್ಲ 4
11. ಯಕ್ಷಗಾನದಲ್ಲೂ ಹಾಡುವವ ಉಂಟೇ? 3
13. ಸುಳ್ಳು ಹೇಳಿದ್ದಕ್ಕೆ ಬೆದರಿಸಲು ಕಬ್ಬಿಣದ ಸಲಾಕಿ 3
14. ಸೊಂಡಿಲಿನಿಂದ ಎಳೆದದ್ದಕ್ಕೆ ಬಿಗಿ ತಪ್ಪಿತು 3
15. ಮಜನೂ ಕೂಡ ಒಬ್ಬ ಮನುಷ್ಯನೇ ತಾನೇ? 3

### 26—09—2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಬಕಾರ 3. ವಿಕ್ರಮ 4. ಚಿಲಕ 6. ಧನವಂತ 7. ಸುಹಾಸಿನಿ 9. ಹಲವರು 12. ಕಳೇಬರ 14. ಗಣಕ 15. ಟಗರು 16. ರಸಪಾಕ

**ಮೇಲಿನಿಂದ ಕೆಳಕ್ಕೆ**

1. ಸಮರ್ಪಿತ 2. ರಚಿಯಿಸು 3. ವಿಧಾನ 5. ಕಲಿಸಿ 6. ಧನಮೋಹ 8. ನಿರಾಧಾರ 10. ಲಫಂಗ 11. ರುಚಿಕರ 12. ಕರಟಕ 13. ಬಗರು

ಪ್ರಶ್ನಾಂಕಣ

# ಪೆಂಗ್ವಿನ್ ಅವನತಿ: ಏಕೆ ಈ ಪರಿಸ್ಥಿತಿ?

ಪೆಂಗ್ವಿನ್: ಅದೊಂದು ಕಡಲ ಹಕ್ಕಿ (ಸೀ ಬರ್ಡ್). ಚಕ್ರವರ್ತಿ ಪೆಂಗ್ವಿನ್ (ಚಿತ್ರ 2), ರಾಜ ಪೆಂಗ್ವಿನ್ (ಚಿತ್ರ 1) ಇತ್ಯಾದಿ ಪೆಂಗ್ವಿನ್‌ಗಳಲ್ಲಿ ಒಟ್ಟು 18 ಪ್ರಭೇದಗಳಿವೆ. ಅಷ್ಟೂ ಪ್ರಭೇದಗಳು ವಿವಿಧ ಗಾತ್ರಗಳಲ್ಲಿವೆ (ಚಿತ್ರ 3). ಧರೆಯ ದಕ್ಷಿಣಾರ್ಧ ಗೋಳದ ಸಾಗರಗಳೇ ಪೆಂಗ್ವಿನ್‌ಗಳ ಪ್ರಧಾನ ಬದುಕಿನ ನೆಲೆ. ಎಲ್ಲ ಪೆಂಗ್ವಿನ್‌ಗಳೂ ಆಹಾರಕ್ಕಾಗಿ ಕಡಲನ್ನೂ, ಸಂತಾನೋತ್ಪತ್ತಿಗಾಗಿ ಕಡಲಂಚಿನ ನೆಲ ಅಥವಾ ಚಳಿಗಾಲದಲ್ಲಿ ಕಡಲಿನ ಮೇಲ್ಮೈನಲ್ಲಿ ಮೈದಳೆವ ಗಟ್ಟಿ ಹಿಮದ ಹಾಸುಗಳನ್ನು ಅವಲಂಬಿಸಿವೆ. ಕಡಲಲ್ಲಿ ಹೇರಳ ಮತ್ಸ್ಯಗಳು, ಕ್ರಿಲ್‌ಗಳು ಕಿಕ್ಕಿರಿದಿರುವ ಪ್ರದೇಶಗಳೇ ಪೆಂಗ್ವಿನ್‌ಗಳ ಬೇಟೆಯ ತಾಣಗಳು.

ಜಗದಾದ್ಯಂತ ಬಹುಪಾಲು ಎಲ್ಲ ಜನರಿಗೂ ಪರಿಚಿತವಾಗಿರುವ ಪೆಂಗ್ವಿನ್‌ಗಳು ಮನುಷ್ಯರಿಗೆ ಮತ್ಸ್ಯಗಳಂತೆ ಜನಪ್ರಿಯ ಆಹಾರವಾಗಿಲ್ಲ. ಮನುಷ್ಯರು ಕಡಲಿನಲ್ಲಿ ಪೆಂಗ್ವಿನ್‌ಗಳನ್ನು ಬೇಟೆಯಾಡುವ ಉದ್ದೇಶವನ್ನೂ ಹೊಂದಿಲ್ಲ. ಆದರೂ, ಕಡಲಿನಲ್ಲಿ ಮನುಷ್ಯರು ನಡೆಸುತ್ತಿರುವ ಚಟುವಟಿಕೆಗಳು ಪರೋಕ್ಷವಾಗಿ ಪೆಂಗ್ವಿನ್‌ಗಳಿಗೆ ತೀವ್ರ ಅಪಾಯವನ್ನು ತಂದಿಟ್ಟಿವೆ. ಅತೀವ ಮೀನುಗಾರಿಕೆ, ಕಡಲಿಗೆ ಬೆರೆಯುತ್ತಿರುವ ಅಪಾರ ವಿಷ ರಾಸಾಯನಿಕಗಳು, ಕಡಲನ್ನು ಸೇರುತ್ತಿರುವ ಬಚ್ಚಲ ಹೊಲಸು, ರಾಶಿ ರಾಶಿ ಪ್ಲಾಸ್ಟಿಕ್ ಕಸ... ಇತ್ಯಾದಿಗಳು ಕೂಡ ಪೆಂಗ್ವಿನ್‌ಗಳಿಗೆ ಹಾನಿಕಾರಕಗಳಾಗಿವೆ.




ಇದೇ ಪಟ್ಟಿಯಲ್ಲಿರುವ ಇನ್ನೊಂದು ಸಂಕಷ್ಟ ಪ್ರತಿನಿತ್ಯ ಪೆಂಗ್ವಿನ್‌ಗಳನ್ನು ಸಾವಿರಗಟ್ಟಲೆ ಸಂಖ್ಯೆಗಳಲ್ಲಿ ಸಾಯಿಸುತ್ತಿದೆ. ಬೃಹತ್ ಮೀನುಗಾರಿಕಾ ಹಡಗುಗಳು ಪ್ರತಿದಿನ ನೂರಾರು ಟನ್‌ಗಟ್ಟಲೆ ಪ್ರಮಾಣದಲ್ಲಿ ಮತ್ಸ್ಯಗಳನ್ನು ಹಿಡಿಯಲು ಬಳಸುವ ವಿವಿಧ ಬಲೆಗಳೇ ಅದಕ್ಕೆ ಕಾರಣ. ಬಹು ಬೃಹತ್ ಉದ್ದ ಅಗಲಗಳ ಇಂಥ ಬಲೆಗಳು ನೀರಿನಲ್ಲಿ ಅಗೋಚರವಾಗಿದ್ದು ದಾರಿಗೆ ಅಡ್ಡ ಬರುವ ಮತ್ಸ್ಯಗಳನ್ನಷ್ಟೇ ಅಲ್ಲದೆ ಕಡಲಾಮೆ, ಸಾಗರ ಸರ್ಪಗಳು, ಡಾಲ್ಫಿನ್‌ಗಳು, ಸೀಲ್‌ಗಳು ಮತ್ತು ಪೆಂಗ್ವಿನ್‌ಗಳನ್ನೂ ಸೆರೆಹಿಡಿಯುತ್ತವೆ. ಹಾಗೆ ಬಂಧಿಗಳಾಗುವ ಪ್ರಾಣಿಗಳು ಈಜಲಾಗದೆ, ಹಾಗಾಗಿ ಉಸಿರಾಡಲಾಗದೆ ಪ್ರಾಣಬಿಡುತ್ತವೆ. ಬಲೆಯನ್ನು ಹಡಗಿನ ಮೇಲಕ್ಕೆ ಎಳೆದು ಮತ್ಸ್ಯಗಳನ್ನೆಲ್ಲ ಸಂಗ್ರಹಿಸುವಾಗ ಪೆಂಗ್ವಿನ್‌ಗಳೂ ಸೇರಿದಂತೆ ಉಳಿದೆಲ್ಲ ಅನಪೇಕ್ಷಿತ ಪ್ರಾಣಿಗಳನ್ನೆಲ್ಲ ವಾಪಸ್ ಕಡಲಿಗೇ ಎಸೆಯಲಾಗುತ್ತದೆ. ಹಾಗಾದಾಗ ದೂರದ ನೆಲದ ಮೇಲೆ ತಂದೆತಾಯಿಯರು ತರುವ ಆಹಾರಕ್ಕಾಗಿ ಕಾದು ಕುಳಿತಿದ್ದ ಮರಿಗಳೆಲ್ಲ ಹಸಿವಿನಿಂದ ಪ್ರಾಣ ನೀಗುತ್ತವೆ.

ಇಂಥವೆಲ್ಲ ಸಂಕಷ್ಟಗಳ ಪರಿಣಾಮವಾಗಿ ಪ್ರಸ್ತುತ ಇರುವ ಒಟ್ಟು 18 ಪೆಂಗ್ವಿನ್ ಪ್ರಭೇದಗಳಲ್ಲಿ 14 ಪ್ರಭೇದಗಳು ಅಳಿದುಹೋಗುವ ಹಾದಿ ಹಿಡಿದಿವೆ; ಅವುಗಳ ಪೈಕಿ ನಾಲ್ಕು ಪ್ರಭೇದಗಳಂತೂ ಕೆಲವೇ ದಶಕಗಳಲ್ಲೇ ನಾಮಾವಶೇಷವಾಗುವ ದಾರಿಯಲ್ಲಿವೆ.

■ ಎನ್. ವಾಸುದೇವ್